ಕರ್ನಾಟಕ ಸರ್ಕಾರದ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560 001

ಸಂಖ್ಯೆ:ಸಿ 8[6]ಶಾಶಿಅ:ಹೊಪ್ರೌಅ;/67/2021-22 ದಿನಾಂಕ: 03/12/2021

"ಇದು ಅತ್ಯಂತ ಜರೂರು ಎಂದು ಭಾವಿಸತಕ್ಕದ್ದು "

## ಜ್ಞಾಪನ

ವಿಷಯ: 2020-21 ನೇ ಸಾಲಿಗೆ ನೋಂದಾಯಿಸಲ್ಪಟ್ಟ ಖಾಸಗಿ ಪ್ರೌಢಶಾಲೆಗಳ 9 ಮತ್ತು 10ನೇ ತರಗತಿಗಳಿಗೆ ಸಂಬಂಧಿಸಿದಂತೆ ಪ್ರಥಮ ಮಾನ್ಯತೆ ಮತ್ತು ಶಾಲಾ ಸಂಕೇತವನ್ನು ನೀಡುವ ಬಗ್ಗೆ.

ಉಲ್ಲೇಖ: 1. ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ. ಇವರ ಪತ್ರ ಸಂಖ್ಯೆ; ಅನು1.ಖಾ.ಅ.ರ.ಪ್ರೌ.ಪ್ರಥಮ.ಮಾನ್ಯತೆ;25/2021-22 ದಿನಾಂಕ:11/10/2021 ಮತ್ತು ವಿವಿಧ ಜಿಲ್ಲಾ ಉಪ ನಿರ್ದೇಶಕರು/ಆಡಳಿತ ಮಂಡಳಿಗಳಿಂದ ಸ್ವೀಕೃತವಾದ ಮನವಿ ಪತ್ರಗಳು

2. ಈ ಕಛೇರಿಯ ಜ್ಞಾಪನ ಪತ್ರದ ದಿನಾಂಕ; 29/03/2021,09/09/2021, 01/10/2021 ಮತ್ತು 13/10/2021

3.ಸರ್ಕಾರದ ಆದೇಶ ಸಂಖ್ಯೆ; ಇಪಿ 55 ಎಸ್ಇಎಸ್ 2021 ದಿನಾಂಕ; 10/02/2021

******

**ಪ್ರಸ್ತಾವನೆ**

ಉಲ್ಲೇಖ-(1)ರ ಪತ್ರದಲ್ಲಿ ಜಿಲ್ಲಾ ಉಪನಿರ್ದೇಶಕರುಗಳು ಮತ್ತು ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯವರು 2020-21ನೇ ಸಾಲಿನಲ್ಲಿ 9 ಮತ್ತು 10ನೇ ತರಗತಿ ನೊಂದಣಿ ಆದೇಶವು ವಿಳಂಬವಾಗಿ ಸಂಸ್ಥೆಗಳಲ್ಲಿ ಸ್ವೀಕೃತವಾಗಿವೆ, ಈ ಶಾಲೆಗಳಿಗೆ ಪ್ರಥಮ ಮಾನ್ಯತೆ ಮತ್ತು ಶಾಲಾ ಸಂಕೇತ ಪಡೆಯುವ ಬಗ್ಗೆ ಮಾರ್ಗದರ್ಶನ ಕೋರಿರುತ್ತಾರೆ.

ಉಲ್ಲೇಖ-(2)ರ ಪತ್ರದಲ್ಲಿ 2020-21ನೇ ಸಾಲಿನಲ್ಲಿ ಕೋವಿಡ್-19ರ ನಿಮಿತ್ತ ಮತ್ತು ಪೂರಕ ದಾಖಲೆಗಳಾದ ಅಗ್ನಿ ಸುರಕ್ಷಾತಾ ಸಮಾಪನಾ ಮತ್ತು ಕಟ್ಟಡ ಸುರಕ್ಷಾತಾ ದೃಢೀಕರಣ ಪಡೆಯಲು ಕಾಲಾವಕಾಶ ನೀಡಲು ಕೋರಿದ್ದ ಹಿನ್ನೆಲೆಯಲ್ಲಿ ಪೂರಕ ದಾಖಲೆ ಸಲ್ಲಿಸಲು/ನೋಂದಣಿಗೆ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ದಿನಾಂಕ ವಿಸ್ತರಿಸಲಾಗಿತ್ತು. 2020-21ನೇ ಶೈಕ್ಷಣಿಕ ಸಾಲಿನಲ್ಲಿ ಯಾವುದೇ ಭೌತಿಕ ತರಗತಿಗಳನ್ನು (ಕೊವಿಡ್-19)ರ ನಿಮಿತ್ತ ನಡೆದಿರುವುದಿಲ್ಲ ಆದಾಗ್ಯೂ ಆಡಳಿತ ಮಂಡಳಿಯವರು ಈಗಾಗಲೇ 2020-21ನೇ ಸಾಲಿನಲ್ಲಿಯೇ 9 ಮತ್ತು 10ನೇ ತರಗತಿಗಳನ್ನು 2021-22ನೇ ಸಾಲಿನಲ್ಲಿ ಪ್ರಾರಂಭಿಸಿರುವುದು ಕಂಡುಬಂದಿದೆ.

ಉಲ್ಲೇಖಿತ-(1)ರ ಪತ್ರದಲ್ಲಿ ಜಿಲ್ಲಾ ಉಪನಿರ್ದೇಶಕರುಗಳು ಮತ್ತು ಶಾಲಾ ಆಡಳಿತ ಮಂಡಳಿಯವರು ಶೈಕ್ಷಣಿಕ ಹಿತದೃಷ್ಟಿಯಿಂದ 2020-21ನೇ ಸಾಲಿನಿಂದ ಪ್ರಥಮ ಮಾನ್ಯತೆ 9ನೇ ತರಗತಿಗೆ ಪ್ರಥಮ ಮಾನ್ಯತೆ ಮತ್ತು 2021-21ನೇ ಸಾಲಿನಲ್ಲಿ 10ನೇ ತರಗತಿಗೆ ಪ್ರಥಮ ಮಾನ್ಯತೆ ಹಾಗೂ ಶಾಲಾ ಸಂಕೇತವನ್ನು ಪಡೆಯಲು ಪ್ರಥಮ ಮಾನ್ಯತೆ ಮತ್ತು ಮಾನ್ಯತೆ ನವೀಕರಣ ನೀಡಲು ಕೋರುವ 9 ಮತ್ತು 10ನೇ ತರಗತಿಗಳಲ್ಲಿ ಕನಿಷ್ಟ ದಾಖಲಾತಿ ಇಲ್ಲದೇ ಇರುವುದರಿಂದ ಮಾನ್ಯತೆ ನವೀಕರಣ ಯಾವ ವರ್ಷದಿಂದ ಪರಿಗಣಿಸಬೇಕು ಹಾಗೂ ಸದರಿ ಮಾನ್ಯತೆ ನವೀಕರಣವನ್ನು ಆನ್‌ಲೈನ್ ತಂತ್ರಾಂಶದಲ್ಲಿ ಮಾಡಬೇಕೇ ಎಂಬುದರ ಕುರಿತು ಕೋರಿಕೆಗಳು ಸ್ವೀಕೃತವಾಗುತ್ತಿವೆ. ಮುಂದುವರೆದು 2020-21ನೇ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ನೀಡಬೇಕಾದ ಆದೇಶಗಳನ್ನು ಉಲ್ಲೇಖ-(2)ರಲ್ಲಿನ ಕಾರಣಗಳಿಂದ 2021-22ನೇ ಸಾಲಿನವರೆಗೆ ನೊಂದಣಿ ಮಾಡಲಾಗಿದೆ. ಮತ್ತು 2020-21ನೇ ಸಾಲಿನಲ್ಲಿ ಭೌತಿಕ ತರಗತಿಗಳು ಪ್ರಾರಂಭವಾಗದ ಹಿನ್ನೆಲೆಯಲ್ಲಿ ಮತ್ತು ಉಲ್ಲೇಖ-(3)ರ ಸರ್ಕಾರದ ಆದೇಶದಲ್ಲಿ ಖಾಸಗಿ ಪ್ರೌಢಶಾಲೆಗಳಿಗೆ ದಾಖಲಾತಿ/ಹಾಜರಾತಿಯಿಂದ ಭಾಗಶ: ವಿನಾಯಿತಿ ನೀಡಲಾಗಿದೆ ಹಾಗೂ ಭೌತಿಕ ತರಗತಿಗಳು ವಿಳಂಬವಾಗಿ ಪ್ರಾರಂಭವಾಗಿರುವುದರಿಂದ ಸದರಿ ಮನವಿ ಹಾಗೂ ಉಲ್ಲೇಖಗಳ ಪತ್ರಗಳನ್ನಾಧರಿಸಿ ವಿಶೇಷ ಪ್ರಕರಣದಡಿ ಈ ಒಂದು ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ, ಈ ಕೆಳಕಂಡಂತೆ ಮಾನ್ಯತೆ ನೀಡಲು ಅಗತ್ಯ ಕ್ರಮವಹಿಸಲು ತಿಳಿಸಿದೆ.

**ಆದೇಶ.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ಖಾಸಗಿ ಅನುದಾನ ರಹಿತ ಪೂರ್ವ ಪ್ರಾಥಮಿಕದಿಂದ ಹತ್ತನೇ ತರಗತಿ/ಪ್ರಾಥಮಿಕದಿಂದ ಹತ್ತನೇ ತರಗತಿ ಮತ್ತು 9 ಮತ್ತು 10ನೇ ತರಗತಿ ಪ್ರಾರಂಭಿಸಲು ವಿಭಾಗ ಮಟ್ಟಕ್ಕೆ ಅರ್ಜಿ ಸಲ್ಲಿಸಿದ್ದು, ಈ ಅರ್ಜಿಗಳನ್ನು ಕೋವಿಡ್-19 ರ ಕಾರಣದಿಂದ 2021-22ನೇ ಸಾಲಿನಲ್ಲಿ ನೊಂದಾಯಿಸಲಾಗಿದೆ. ಈ ರೀತಿ ಆಯುಕ್ತಾಲಯದಿಂದ ನೊಂದಾಯಿಸಿದ ಶಾಲೆಗಳಿಗೆ ಸರ್ಕಾರದ ಆದೇಶ ಸಂಖ್ಯೆ; ಇಪಿ 55 ಎಸ್‌ಇಎಸ್ 2021 ದಿನಾಂಕ; 10/02/2021 ರಲ್ಲಿ 2020-21ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಪ್ರೌಢಶಾಲೆಗಳಲ್ಲಿ ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಸಂಖ್ಯೆಯನ್ನು ಕನಿಷ್ಠ 25 ವಿದ್ಯಾರ್ಥಿಗಳ ಸಂಖ್ಯೆಗೆ ಬದಲಾಗಿ 15 ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿ ಮಾನ್ಯತೆ ನವೀಕರಿಸಲು ಸೂಚಿಸಲಾಗಿದೆ. ಸದರಿ ಆದೇಶದಂತೆ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸಿ 2021-22ನೇ ಸಾಲಿನಲ್ಲಿ ನೊಂದಾಯಿಸಲಾದ ಶಾಲೆಗಳಿಗೆ ಮಾತ್ರ ಪ್ರಥಮ ಮಾನ್ಯತೆ ನೀಡಲು ತಿಳಿಸಲಾಗಿದೆ. ಆದುದರಿಂದ ಸದರಿ ಪ್ರಥಮ ಮಾನ್ಯತೆಯನ್ನು ಇಲಾಖೆ ನಿಗಧಿಪಡಿಸಿದ ತಂತ್ರಾಂಶ ಬಿಡುಗಡೆಯಾದ ನಂತರ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪಡೆದುಕೊಂಡು ಪ್ರಥಮ ಮಾನ್ಯತೆ ನೀಡುವುದು ಮತ್ತು ಮಾನ್ಯತೆ ನವೀಕರಿಸುವುದು

03/12/2021

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ನಿರ್ದೇಶಕರು(ಪರೀಕ್ಷೆಗಳು) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,ಮಲ್ಲೇಶ್ವರಂ,ಬೆಂಗಳೂರು-56002
3. ಹಿರಿಯ ಸಹಾಯಕ ನಿರ್ದೇಶಕರು(ಎಸ್ ಎ ಟಿ ಎಸ್) ವಿಭಾಗ, ಇವರಿಗೆ ತುರ್ತು ಕ್ರಮಕ್ಕಾಗಿ
4. ಶ್ರೀ ಶಿವಕುಮಾರ್, ಹಿರಿಯ ಕಂಪ್ಯೂಟರ್ ಪ್ರೋಗ್ರಾಮರ್, ಎಸ್.ಎಸ್.ಕೆ, ಬೆಂಗಳೂರು- ಇವರಿಗೆ ಮಾಹಿತಿಗಾಗಿ
5. ಕಚೇರಿ ಕಡತ ರಕ್ಷಾ ಪ್ರತಿ